# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 2289/2024**

ಪಿರ್ಯಾದಿಃ ಶ್ರೀಮತಿ ಸವಿತಾ ಶಿವಾನಂದ ನಾಯ್ಕ

**ವಿರುದ್ಧ**

ಆರೋಪಿಃ ಶ್ರೀಮತಿ ಉಜ್ವಲಾ ತಂದೆ ಕಾಶಿನಾಥ ಪೇಡ್ನೇಕರ

## ಆಪಾದನೆ ಹೇಳಿಕೆ

ಪ್ರಸ್ತುತ ಪ್ರಕರಣದ ಆರೋಪಿಯಾದ ನೀವು, ಫಿರ್ಯಾದಿಯವರಿಗೆ ಕೊಡುವ ಹಣದ ಮರುಪಾವತಿಗಾಗಿ ಇಂಡಿಯನ್ ಬ್ಯಾಂಕ್, ಕಾರವಾರ ಶಾಖೆಯ ಚೆಕ್ ನಂ. 929313 ನೇದನ್ನು ದಿನಾಂಕ 07.02.2024, ರೂ.10,00,000/- ಎಂದು ನಮೂದಿಸಿ ಪಿರ್ಯಾದಿದಾರರಿಗೆ ನೀಡಿದ್ದು, ಫಿರ್ಯಾದಿಯು ಸದ್ರಿ ಚೆಕ್ ನ್ನು ನಗದಿಕರಿಸಲು ಕರ್ನಾಟಕ ಬ್ಯಾಂಕ್, ಕಾರವಾರ ಶಾಖೆಗೆ ಸಲ್ಲಿಸಿದಾಗ ದಿಃ08.02.2024 ರಂದು ಸದ್ರಿ ಚೆಕ್ ನಗದೀಕರಣವಾಗದೇ ಅಮಾನ್ಯಗೊಂಡು "**Funds Insufficient**" ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು, ಸದ್ರಿ ಚೆಕ್ಕನ್ನು ಪುನಃ ನಗದೀಕಣಕ್ಕಾಗಿ ಸದ್ರಿ ಕರ್ನಾಟಕ ಬ್ಯಾಂಕ್, ಕಾರವಾರ ಶಾಖೆಗೆ ಸಲ್ಲಿಸಿದಾಗ ಬ್ಯಾಂಕಿಗೆ ಸಲ್ಲಿಸಿದಾಗ ದಿಃ18.03.2024 ರಂದು ಸದ್ರಿ ಚೆಕ್ ನಗದೀಕರಣವಾಗದೇ ಅಮಾನ್ಯಗೊಂಡು "**Funds Insufficient**" ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿದ್ದು, ದಿನಾಂಕ 10.04.2024 ರಂದು ಪಿರ್ಯಾದಿದಾರರು ತಮ್ಮ ವಕೀಲರ ಮೂಲಕ ನಿಮಗೆ ಲೀಗಲ್ ನೋಟಿಸು ನೀಡಿದ್ದು ಅದನ್ನು ನೀವು ಸ್ವೀಕರಿಸಿದ್ದರೂ ಸಹಾ ಸದರಿ ನೋಟಿಸಗೆ ಉತ್ತರವನ್ನು ನೀಡದೇ ಸದರಿ ಚೆಕ್ಕಿನ ಹಣವನ್ನು ಫಿರ್ಯಾದಿಗೆ ಹಿಂದಿರುಗಿಸದೇ ನೀವು ಕಾಯ್ದೆ ಕಲಂ.138 ಎನ್.ಐ.ಎಕ್ಟ ರ ಅಡಿಯಲ್ಲಿ ಶಿಕ್ಷಿಸಲ್ಪಡುವ ಆಪಾದನೆಯನ್ನು ಎಸಗಿರುವಿರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ 1 ಈಗ ಓದಿ ಹೇಳಿದ ಆಪಾದನೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2 ಈಗ ಓದಿ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಮಾಡಿಕೊಳ್ಳ ಬಯಸುತ್ತೀರೋ?

ಉತ್ತರ:

(ಸದ್ರಿ ಆಪಾದನೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು)

Sd/-

ಕಾರವಾರ **ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ದಿ: 05.12.2024.** **ಮತ್ತು ಪ್ರಧನ್ಯಾದಂ., ಕಾರವಾರ**